ಸಾವಿರ ಹಾಡಿನ ಸರದಾರ

ಬೀರಪ್ಪ ಗೋಟೂರ



ಡಾ|| ರಾಜಶೇಖರ ಇಚ್ಚಂಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ-೬೩

ಸಾವಿರ ಹಾಡಿನ ಸರದಾರ

ಬೀರಪ್ಪ ಗೋಟೂರ

ವ್ಯಕ್ತಿ ಪರಿಚಯ

ಡಾ॥ ರಾಜಶೇಖರ ಇಚ್ಚಂಗಿ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

Savira Hadina Saradara Berappa Gotura-A pen portrait By **Dr. Rajashekara Ichangi** Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054, Phone : 080-23605033

Janapada Loka : **27201143**

ಪ್ರಥಮ ಮುದ್ರಣ : ೨೦೧೧ ಪುಟಗಳು : ೩೨

ಪ್ರತಿಗಳು : ೧೦೦೦

ಬೆಲೆ : **ರೂ. ೧೦** (ಹತ್ತು ರೂಪಾಯಿಗಳು)

ಮುದ್ರಕರು :

ಚಂದನ ಪ್ರಿಂಟರ್ಸ್

ನಂ. ೫೭, ವಿನಾಯಕ ಕಾಂಪ್ಲೆಕ್ಸ್

೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ

ಬ್ಯಾಂಕ್ ಕಾಲೋನಿ, ಬೆಂಗಳೂರು–೫೬೦ ೦೫೦.

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯುಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು, ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ವಿದ್ವಾಂಸರಾದ **ಡಾ॥ ರಾಜಶೇಖರ ಇಚ್ಚಂಗಿ** ಅವರು **'ಸಾವಿರ ಹಾಡಿನ ಸರದಾರ ಬೀರಪ್ಪ ಗೋಟೂರ'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೦–೦೩–೨೦೧೧

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೀರಪ್ಪ ಹುಚ್ಚಪ್ಪ ಗೋಟೂರ

ಪ್ರಸ್ತಾವನೆ

ಒಂದು ನಾಡಿನ ಬದುಕಿನಲ್ಲಿ ರಂಗಭೂಮಿಗೆ ಪ್ರಮುಖವಾದ ಸ್ಥಾನವಿದೆ. ಇದು ಮೂಲತಃ ಮನರಂಜನೆಗಾಗಿ ಹುಟ್ಟಿ ಇಂದು ಸಾರ್ವಭೌಮ ಕಲೆಯಾಗಿ ಪರಿಣಮಿಸಿದೆ. ಕರ್ನಾಟಕದ ರಂಗಭೂಮಿಗೆ ಭವ್ಯವಾದ ಮತ್ತು ಸುದೀರ್ಘವಾದ ಪರಂಪರೆಯಿದೆ. ಸಾವಿರಾರು ವರ್ಷಗಳು ಉಳಿಯುವಿಕೆಯಲ್ಲಿ ಈ ಕಲೆ ವಿಭಿನ್ನ ರೂಪಗಳನ್ನು ತಾಳುತ್ತ, ಪ್ರಯೋಗಶೀಲ ಪ್ರವೃತ್ತಿಗಳನ್ನು ಸೃಷ್ಟಿಸುತ್ತ ಉತ್ತರೋತ್ತರವಾಗಿ ಬೆಳೆದು ಬಂದಿರುವುದು ನಾಡಿನ ಸಾಂಸ್ಕೃತಿಕ ಹಿರಿಮೆಗೆ ಉಜ್ವಲ ನಿದರ್ಶನವಾಗಿದೆ. ಈ ಸಾಧನೆಯಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಪಾತ್ರ ಅಮೋಘವಾದುದು. ಈ ಜಿಲ್ಲೆಯ ರಂಗಭೂಮಿಯ ಕಾರ್ಯಕ್ಷೇತ್ರವನ್ನು ಅಭ್ಯಾಸ ದೃಷ್ಟಿಯಿಂದ ಸ್ಥೂಲವಾಗಿ ಜನಪದ ರಂಗಭೂಮಿ, ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಯೆಂದು ವಿಭಜಿಸಬಹುದು. ಇಲ್ಲಿ ಹುಕ್ಕೇರಿ ತಾಲ್ಲೂಕನ್ನು ಮುಖ್ಯವಾಗಿ ಇಟ್ಟುಕೊಂಡು ಜನಪದ ರಂಗಭೂಮಿಯ ಕಿರುಪರಿಚಯ ಮಾಡಿಕೊಡುವ ಪ್ರಯತ್ನ ಮಾಡಿದ್ದೇನೆ.

ಕರ್ನಾಟಕ ಜನಪದ ರಂಗಭೂಮಿಯ ಶ್ರೀಮಂತಿಕೆ ಹೆಚ್ಚಿಸುವಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕೊಡುಗೆ ಅಪೂರ್ವವಾದುದು. ಶ್ರೀಕೃಷ್ಣ ಪಾರಿಜಾತ, ಗೊಂಬೆಯಾಟ, ಪಗರಣ,

ಬಯಲಾಟ, ಸಣ್ಣಾಟ ಮುಂತಾದುವು ಈ ನೆಲದಲ್ಲಿ ಹೊಸ ಹೊಸ ಪ್ರಯೋಗವಾಗುತ್ತ ಪರಿಷ್ಕಾರಗೊಳ್ಳುತ್ತ ಹೆಚ್ಚು ಜನಪ್ರಿಯತೆ ಗಳಿಸಿವೆ. ಇಲ್ಲಿಯ ಬಯಲಾಟಗಳು ಸಾಂಪ್ರದಾಯಿಕತೆಯನ್ನು ಉಳಿಸಿಕೊಂಡು ಬಂದಿವೆ. ಜೊತೆಗೆ ಕರ್ನಾಟಕ ಮತ್ತು ಹಿಂದುಸ್ತಾನ ಸಂಗೀತ ಶೈಲಿಗಳೆರಡನ್ನೂ ಸಮನ್ವಯಿಸಿಕೊಂಡ ಸುಶ್ರಾವ್ಯ ಹಾಡುಗಾರಿಕೆ ಈ ಬಯಲಾಟಗಳ ವಿಶೇಷತೆ. ವಸ್ತುವಿಗೆ ತಕ್ಕಂತೆ ಭವ್ಯ ರಂಗಮಂಟಪ, ಗಂಭೀರಗತ್ತಿನ ಕುಣಿತ, ಕಣ್ಣು ಕೋರೈಸುವ ಭುಜ ಕಿರೀಟ, ತಲೆ ಕಿರೀಟಗಳು, ಮಾತಿನ ಆರ್ಭಟ, ರಂಗುರಂಗಿನ ವೇಷಭೂಷಣಗಳು ಕಣ್ಮನ ಸೆಳೆಯುತ್ತವೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಗೋಕಾಕ, ಕಿತ್ತೂರ, ಬೈಲಹೊಂಗಲ ಮುಂತಾದ ತಾಲ್ಲೂಕುಗಳಲ್ಲಿ ಜಾತ್ರೆ–ಉತ್ಸವ–ಹಬ್ಬ–ಹರಿದಿನಗಳಲ್ಲಿ ಇಂದಿಗೂ ಬಯಲಾಟವನ್ನು ಆಡಲಾಗುತ್ತದೆ.

ಅಮ್ಮಣಗಿಯ ಮಲ್ಲಿನಾಥ ಶಾಸ್ತ್ರಿಗಳು ರಚಿಸಿ ಪ್ರಯೋಗಿಸಿದ 'ಶನಿಪ್ರಭಾವ', 'ಭಕ್ತಮಾರ್ಕಂಡೇಯ' 'ಸೋಮಶೇಖರ ಸುಶೀಲ' ಈ ನಾಟಕಗಳು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಭಾಗದ ಪ್ರದೇಶಗಳಲ್ಲಿ ಸಾಕಷ್ಟು ಪ್ರಭಾವ ಬೀರಿವೆ. ಅದೇ ರೀತಿ ವಂಟಮೂರಿಯ ಚೆನ್ನಮಲ್ಲಪ್ಪ ಬಸ್ನಾಪೂರಿ ಇವರು 'ಇಂದ್ರಜಿತು' ದೊಡ್ಡಾಟ ರಚಿಸಿ ಪ್ರಯೋಗಿಸಿದ್ದಾರೆ. ಬಸ್ತವಾಡದ ಹಸನಸಾಬ ಮಲ್ಲಾಪೂರಿ, ಹುಕ್ಕೇರಿಯ ಕಾಡಪ್ಪ ಉಪ್ಪಾರ, ಬೀರಪ್ಪ ಹುಚ್ಚಪ್ಪ ಗೋಟೂರ, ರಾಮಪ್ಪ ಅಲಗರಾವುತ, ದಾದಬಾನಟ್ಟಿಯ ಅಣ್ಣಪ್ಪ ಪೂಜಾರಿ, ಶಿರಗಾಂವಿಯ ಲಗಮಣ್ಣಾ, ಯಮಕನ ಮರ್ಡಿಯ ಅಪ್ಪಣ್ಣ ಕಟ್ಟೀಮನಿ ಮುಂತಾದವರು ಬಯಲಾಟಗಳಲ್ಲಿ ಇಂದಿಗೂ

ಪಾತ್ರ ವಹಿಸುತ್ತಿದ್ದಾರೆ. ಪ್ರತಿ ವರ್ಷಕ್ಕೊಮ್ಮೆ ದಡ್ಡಿ ಗ್ರಾಮದಲ್ಲಿ ದಶಾವತಾರ ಆಟ ಪ್ರಯೋಗಗೊಳ್ಳುತ್ತಿರುವುದು ಒಂದು ವಿಶೇಷ.

ಮೂಲತಃ ಅಪರಾಳ ತಮ್ಮಣ್ಣನಿಂದ 'ಹಾಡುಗಬ್ಬ'ವಾಗಿ ರಚನೆಯಾದ 'ಶ್ರೀಕೃಷ್ಣ ಪಾರಿಜಾತ' ಕೃತಿಯು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕುಲಗೋಡ ತಮ್ಮಣ್ಣನಿಂದಾಗಿ ಜನಪ್ರಿಯ ರಂಗರೂಪವಾಗಿ ಜಯಭೇರಿ ಹೊಡೆಯಿತು. ಪ್ರಯೋಗ ದೃಷ್ಟಿಯಿಂದ ಸುವರ್ಣ ಮಾಧ್ಯಮ ಸ್ವರೂಪವನ್ನಿತ್ತ ತಮ್ಮಣ್ಣನೊಂದಿಗೆ ಶ್ರಮಿಸಿದವರಲ್ಲಿ ಮತ್ತು ಆ ಪರಂಪರೆಯನ್ನು ಮುಂದುವರೆಸಿದವರಲ್ಲಿ ಕೌಜಲಗಿ ನಿಂಗವ್ವಳ ಹೆಸರು ಚಿರಸ್ಮರಣೀಯ. ಖ್ಯಾತ ಕಲಾವಿದೆ ಕೌಜಲಗಿ ನಿಂಗಮ್ಮನ ತಂಡದಲ್ಲಿ ಕೆಲಸ ಮಾಡಿದ ಅನೇಕ ಕಲಾವಿದರು ಈ ತಾಲ್ಲೂಕಿನೊಳಗೆ ಇದ್ದಾರೆ. ಅಮ್ಮಣಗಿಯ ಶಿವಲಿಂಗಯ್ಯ ಹಿರೇಮಠ ಇವರ ಮನೆ ಅಂದು ಬಯಲಾಟ ಕಲಾವಿದರಿಗೆ ಗುರುಕುಲವಾಗಿತ್ತು. ಅನೇಕ ಕಲಾವಿದರು ಈ ಗುರುಕುಲದಲ್ಲಿ ರೂಪುಗೊಂಡಿದ್ದಾರೆ. ಅಂಥವರಲ್ಲಿ ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಒಬ್ಬರು. ಹುಕ್ಕೇರಿ ಸಿದ್ರಾಮಪ್ಪ, ಬೆಲ್ಲದ ಬಾಗೇವಾಡಿಯ ಬಾಳಗೋಪಾಲ, ರಾಮಪ್ಪ ಬಿಡಿಸಿನಾವಿ, ಪರಪ್ಪ ಇಸ್ಲಾಂಪುರ, ಬಡಕುಂದ್ರಿಯ ಬಸಣ್ಣ ಮಾಣಗಾವಿ, ದುಂಡಪ್ಪ ಮಾಣಗಾವಿ, ಬೆಳಗಾವಿಯ ಶಂಕರಪಾಟೀಲ, ಸತ್ಯಪ್ಪ ಬಡಿಗೇರ ಮುಂತಾದ ಕಲಾವಿದರು ಇಂದಿಗೂ ಜನಮನದಲ್ಲಿ ಉಳಿದಿದ್ದಾರೆ. ಈಗಲೂ ಬಡಕುಂದ್ರಿ, ಬಸ್ಸಾಪೂರ, ಹತ್ತರಗಿ ಊರುಗಳಲ್ಲಿ ಪಾರಿಜಾತ ಮೇಳಗಳಿವೆ.

ರಾಧಾನಾಟ ಆಡುವುದರಲ್ಲಿ ಅಮ್ಮಣಗಿಯ ಸುಬ್ಬರಾವ ಅವರಂತೆ ಹುಕ್ಕೇರಿಯ ಬೀರಪ್ಪ ಹುಚ್ಚಪ್ಪ ಗೋಟೂರ ಅವರು 'ಅಭಿಜಾತ ನಟ'ರೆಂದು ಹೆಸರು ಗಳಿಸಿದ್ದಾರೆ. ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರಗಳ ಗಡಿಭಾಗದಲ್ಲಿ ಇವರ ನಟನಾ ಕೌಶಲ್ಯದಿಂದ 'ರಾಧಾನಾಟ' ಬಹಳ ಪ್ರಸಿದ್ಧಿ ಪಡೆದಿದೆ. ಕೋಚರಿಯ ಬಾಳಗೌಡ ಪಾಟೀಲರು ರಾಧಾನಾಟ ಹಾಗೂ ದೊಡ್ಡಾಟಗಳಿಗೆ ಸಂಭಾಷಣೆ ಬರೆದು ಕೊಡುವುದಲ್ಲದೆ, ಆಟಗಳಿಗೆ ನಿರ್ದೇಶನ ನೀಡಿ, ಅನೇಕ ಪ್ರಯೋಗಗಳನ್ನು ಪ್ರದರ್ಶಿಸಿದ್ದಾರೆ. ಈಗಲೂ ಈ ಆಟವಾಡುವ ಮೇಳಗಳಲ್ಲಿ ಬಸ್ಸಾಪೂರದ ರಾಯಣ್ಣ ಗೌಡ ಪಾಟೀಲ, ಹುಕ್ಕೇರಿಯ ಬೀರಪ್ಪ ಗೋಟೂರ, ಕಾಡಪ್ಪ ಉಪ್ಪಾರ ಮೊದಲಾದವರು ಪ್ರಸಿದ್ಧರಾಗಿದ್ದಾರೆ.

ಹಿನ್ನೆಲೆ

ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಜಗಜ್ಯೋತಿ ಬಸವೇಶ್ವರರ ವಂಶಜರು ಬಾಳಿ ಬದುಕಿದ ನಾಡಿದು. ಬಸವಣ್ಣನವರ ಅಣ್ಣ ದೇವರಾಜನ ಮೊಮ್ಮಗ ಹಾಲಿ ಬಸವದೇವ ಎಂಬುವನು ಹುಕ್ಕೇರಿಯ ಪಶ್ಚಿಮಕ್ಕಿರುವ ಕವಿಳಾಸಪುರದಲ್ಲಿ(ಅರ್ಜುನವಾಕ) ನೆಲೆಸಿ ವೀರವ್ರತ ಆಚರಿಸಿ ಪ್ರಸಿದ್ಧನಾದನೆಂಬ ಉಲ್ಲೇಖ ಅರ್ಜುನವಾಕ ಶಾಸನದಲ್ಲಿದೆ.

ಹುಕ್ಕೇರಿ ಪಟ್ಟಣವನ್ನು ಹಲವಾರು ರಾಜ ಮನೆತನಗಳು ಆಳಿ ಹೋಗಿವೆ. ಸವದತ್ತಿರಟ್ಟರು, ಕಲ್ಯಾಣದ ಚಾಲುಕ್ಯರು, ದೇವಗಿರಿಯ ಯಾದವರು, ಮಹಮ್ಮದ–ಬಿನ್–ತುಘಲಕ್, ಬಿಜಾಪುರದ ಆದಿಲ್ ಶಾಹಿಗಳಿಂದ ಆಳಲ್ಪಟ್ಟಿದೆ ಎಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಇಲ್ಲಿಯ ವೀರಶೈವ ಮನೆತನಗಳಲ್ಲಿ ಗೋಟೂರ ಮನೆತನವೂ ಒಂದು.

ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಜನಪದ ಕಲೆಗಳು ಮೂಲೆಗುಂಪಾಗಿ ನಮ್ಮ ಸಾಂಸ್ಕೃತಿಕ ಸಂಪತ್ತು ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಕಲೆಯ ಉಳಿಯುವಿಕೆಗಾಗಿ ಬದುಕನ್ನು ಮೀಸಲಿಟ್ಟಿರುವ ಹುಕ್ಕೇರಿಯ ಬೀರಪ್ಪ ಹುಚ್ಚಪ್ಪ ಗೋಟೂರ ಕನ್ನಡ ನಾಡಿನ ಅಪರೂಪದ 'ಡೊಳ್ಳು ಕುಣಿತದ ಕಣಿ ಸಾವಿರ ಹಾಡಿನ ಸರದಾರ' ಎಂದೇ ಉತ್ತರ ಕರ್ನಾಟಕದಲ್ಲಿ ಮನೆಮಾತಾಗಿದ್ದಾರೆ.

ಇವರು ತಮ್ಮ ಕುಲವೃತ್ತಿಯಾದ ಕುರಿ ಸಾಕಾಣಿಕೆಯನ್ನು ತಮ್ಮ ಜೀವನೋಪಾಯಕ್ಕಾಗಿ ಮಾಡಿಕೊಳ್ಳುತ್ತಿದ್ದರೆ, ಡೊಳ್ಳನ್ನು

ಆತ್ಮತೃಪ್ತಿಗಾಗಿ ಬಾರಿಸುತ್ತಿದ್ದರು. ಬೀರಪ್ಪನ ಡೊಳ್ಳು ಕುಣಿತದ ದನಿ ಕೇಳದ ಕಲಾರಸಿಕರಿಲ್ಲ: ಡೊಳ್ಳಿನ ಮೇಲೆ ಬೀರಪ್ಪನ ಕೈ ಪೆಟ್ಟಿಗೆ ತಲೆದೂಗದವರಿಲ್ಲ.

ಬಾಲ್ಯ-ಶಿಕ್ಷಣ-ಉದ್ಯೋಗ

ಬೀರಪ್ಪನವರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ನಗರದ ಕುರುಬ ಕುಟುಂಬದಲ್ಲಿ 25-2-1942ರಲ್ಲಿ ಜನಿಸಿದರು. ತಂದೆ ಹುಚ್ಚಪ್ಪ. ತಾಯಿ ನಾಗವ್ವ. ಗೋಟೂರ ಎಂಬುದು ಮನೆತನದ ಹೆಸರು. ಹೀಗಾಗಿ ಬೀರಪ್ಪ ಹುಚ್ಚಪ್ಪ ಗೋಟೂರ ಅವರು 'ಬೀರಪ್ಪ ಗೋಟೂರ' ಎಂದೇ ಬೆಳಗಾವಿ ನಾಡಿಗೆ ಚಿರಪರಿಚಿತರು.

ಮೂಲತಃ ಹುಕ್ಕೇರಿ ತಾಲೂಕಿನ ಗೋಟೂರ ಗ್ರಾಮದವರಾದ ಹುಚ್ಚಪ್ಪ ಗೋಟೂರು ಅವರು ಬಡತನದ ಕಾರಣದಿಂದ ಹೊಟ್ಟೆ ಹೊರೆಯುವುದಕ್ಕಾಗಿ ನಾಲ್ಕಾಣೆ ಕೂಲಿಯನ್ನು ಅರಸಿಕೊಂಡು ಬಂದು ಹುಕ್ಕೇರಿಯಲ್ಲಿ ನೆಲೆಸಿದರು. ಆ ಕಾರಣದಿಂದ ಇವರಿಗೆ ಹುಕ್ಕೇರಿಯಲ್ಲಿ ಗೋಟೂರ ಮನೆತನದವರೆಂಬ ಹೆಸರು ಬಂದಿತು. ಜೊತೆಗೆ ವಂಶಪರಂಪರೆಯಿಂದ ಬಂದ ಕುರಿ ಸಾಕಾಣಿಕೆ ಕಾರ್ಯ ಮುಂದುವರೆಸಿದರು.

ಬಡತನದ ಕಾರಣದಿಂದ ಹುಚ್ಚಪ್ಪನು ತನ್ನ ಮಗನಾದ ಬೀರಪ್ಪನನ್ನು ಓದಿಸಲು ಇಷ್ಟಪಡಲಿಲ್ಲ. ಯಾಕೆಂದರೆ ಓದಿನಿಂದ ಬರುವ ಲಾಭವು ಅಷ್ಟರಲ್ಲಿಯೇ ಇದೆ. ಅದರ ಬದಲು ಕುರಿ ಕಾಯುವುದರಿಂದ ಆರ್ಥಿಕವಾಗಿ ಸ್ವಲ್ಪ ಸಹಾಯವಾಗಬಹುದೆಂಬ ನಂಬಿಕೆಯ ಕಾಲ ಅದಾಗಿತ್ತು. ಆ ಹಿನ್ನೆಲೆಯಲ್ಲಿ ಬೆಳೆದ ಬೀರಪ್ಪನು

ಮೂರನೇ ವರ್ಗಕ್ಕೆ ಓದು ನಿಲ್ಲಿಸಿ, ವಂಶಪರಂಪರೆಯಿಂದ ಬಂದ ಕುರಿ ಕಾಯುವ ಕಾಯಕದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡನು. ಅದರಲ್ಲಿಯೇ ನೆಮ್ಮದಿಯ ಬದುಕನ್ನು ಕಾಣತೊಡಗಿದನು.

ರಾತ್ರಿಯೆಲ್ಲ ಕುರಿ ಮಂದೆ ಕಾಯಬೇಕಾಗುವ ಕಾರಣದಿಂದ ಪದ ಕಟ್ಟುವುದು ಹಾಡುವುದು, ಡೊಳ್ಳು ಬಾರಿಸುವುದು ಮೊದಲಾದ ಮನರಂಜನೆಯಿಂದ ಬೀರಪ್ಪ ಡೊಳ್ಳಿನ ಕಲೆಯಲ್ಲಿ ಪ್ರಖ್ಯಾತರಾಗಿ ಬೆಳೆಯಲು ಪ್ರೇರಣೆಯಾಯಿತು.

ಕುರುಬ ಜಾತಿಯಲ್ಲಿ ಹುಟ್ಟಿದ ಇವರ ಕುಲದೇವರು ರಾಯಭಾಗ ತಾಲೂಕಿನ ಆಲಕನೂರು ಗ್ರಾಮದ ಕರಿಸಿದ್ಧ. ಆದರೆ ಕುಲದೇವತೆ ಹುಕ್ಕೇರಿ ನಗರದ 'ಗ್ರಾಮದೇವತೆ ಲಕ್ಷ್ಮೀದೇವಿ' ಎಂದು ಹೇಳಬಹುದು. ಪ್ರತಿ ವರ್ಷ ಅಲಕನೂರಿನ ಪೂಜಾರಿಗಳು ಗೋಟೂರಿಯವರ ಮನೆಯಲ್ಲಿ ಉಲ್ಪಿ ಪಡೆದುಕೊಂಡು ಹೋಗುವ ಸಂಪ್ರದಾಯವಿದೆ.

ಪರಿಸರ–ಪ್ರಭಾವ–ಪ್ರೇರಣೆ

ತಂದೆಯಾದ ಹುಚ್ಚಪ್ಪ ಗೋಟೂರು ಇವರು ಹಬ್ಬ–ಹರಿದಿನಗಳಲ್ಲಿ, ಜಾತ್ರೆ–ಉತ್ಸವಗಳಲ್ಲಿ, ಸ್ವಾತಂತ್ರ್ಯ ದಿನಾಚರಣೆ, ಪ್ರಜಾರಾಜ್ಯ ದಿನೋತ್ಸವ ಮುಂತಾದ ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ, ರಾಮಾಯಣ, ಪಾಂಡವರ ಪ್ರತಾಪ, ಆದಿಶಕ್ತಿಪುರಾಣ, ಬೀರದೇವರು, ದಕ್ಷಬ್ರಹ್ಮ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಿಸಿದ ಹಾಡುಗಳನ್ನು ಡೊಳ್ಳು ಬಾರಿಸುತ್ತ ಹಾಡುತ್ತಿದ್ದರು. ಈ ಒಂದು ಪರಂಪರೆ ತಂದೆಯಿಂದ ಮಗನಿಗೆ

ಬಳುವಳಿಯಾಗಿ ಬಂದಿತು ಅಲ್ಲದೆ ಡೊಳ್ಳಿನ ಹಾಡುಗಳನ್ನು ಸ್ವತಃ ಕಟ್ಟಿ ಹಾಡುವುದನ್ನೇ ರೂಢಿಗತ ಮಾಡಿಕೊಂಡ ಬೀರಪ್ಪನು ಸ್ವಾತಂತ್ರ್ಯೋತ್ಸವ ಪ್ರಜಾರಾಜ್ಯೋತ್ಸವ ಸಂದರ್ಭಗಳಲ್ಲಿ ಸಾವಿರಕ್ಕೂ ಮೀರಿ ಡೊಳ್ಳಿನ ಹಾಡುಗಳನ್ನು ಹಾಡುವ ಮೂಲಕ ದೇಶಭಕ್ತಿ ಮೆರೆದಿದ್ದಾರೆ. 'ಡೊಳ್ಳಿನ ಹಾಡಿನ ಸರದಾರ' 'ಡೊಳ್ಳಿನ ಹಾಡಿನ ಕಣಿ' ಎಂದೇ ಉತ್ತರ ಕರ್ನಾಟಕದಲ್ಲಿ ಮನೆಮಾತಾಗಿದ್ದಾರೆ.

ಪಾರಿಜಾತ ಆಡಿದ ಖ್ಯಾತ ಕಲಾವಿದೆ ಕೌಜಲಗಿ ನಿಂಗಮ್ಮನ ತಂಡದಲ್ಲಿ ಕೆಲಸ ಮಾಡಿದ ಅನೇಕ ಕಲಾವಿದರಲ್ಲಿ ಬೀರಪ್ಪ ಗೋಟೂರು ಒಬ್ಬರು. ಕೌಜಲಗಿ ನಿಂಗಮ್ಮ ಕೆಲವು ಕಾಲ ಅಮ್ಮಣಗಿಯ ಶಿವಲಿಂಗಯ್ಯ ಹಿರೇಮಠರ ಗುರುಕುಲದಲ್ಲಿ ಇದ್ದಳೆಂದು 'ಸ್ಟೇಜ್ ಟೈಗರ್' ಎಂದೇ ಖ್ಯಾತಿ ಪಡೆದಿದ್ದ ಅಮ್ಮಣಗಿಯ ದಿ. ಬಾಬುರಾವ ದೇಸಾಯಿಯವರ ಲೇಖನವೊಂದರಿಂದ ತಿಳಿದು ಬರುತ್ತದೆ.

ಇದರ ಜೊತೆಗೆ ಹುಕ್ಕೇರಿ ಬಾಳಪ್ಪ, ಸಕ್ರೆವ್ವ ಪಾತ್ರೋಟ, ಅಮ್ಮಣಿಗಿಯ ಸುಬ್ಬರಾವ, ಕೋಚರಿಯ ಬಾಳಗೌಡ ಪಾಟೀಲ, ಬಸ್ಸಾಪೂರದ ರಾಯನಗೌಡ ಪಾಟೀಲ ಹಾಗೂ ಹುಕ್ಕೇರಿಯ ಕಾಡಪ್ಪ ಉಪ್ಪಾರ ಇವರ ಒಡನಾಟದಲ್ಲಿ ಸಣ್ಣಾಟ ಹಾಗೂ ದೊಡ್ಡಾಟದಲ್ಲಿ ಅಭಿನಯ ಕಲೆಯನ್ನು ರೂಢಿಸಿಕೊಂಡಿದ್ದಾರೆ.

ಎಲ್ಲಕ್ಕೂ ಮುಖ್ಯವಾಗಿ ಹುಕ್ಕೇರಿಯ ಎಸ್. ಕೆ. ಹಾಯ ಸ್ಕೂಲಿನಲ್ಲಿ ಅಟೆಂಡರ್ ಹಾಗೂ ಸಣ್ಣಾಟದ ಹೆಸರಾಂತ ಶಿಕ್ಷಕರೂ ಆಗಿದ್ದ ಶ್ರೀ ಗುರಪ್ಪ ಅಲಗರಾವುತ ಇವರ ಸಮರ್ಥ

ಮಾರ್ಗದರ್ಶನದಲ್ಲಿ ನಿಜಗುಣ ಶಿವಯೋಗಿ, ರಾಧಾನಾಟ, ಸಂಗ್ಯಾಬಾಳ್ಯ ಮುಂತಾದ ಅನೇಕ ಸಣ್ಣಾಟಗಳಲ್ಲಿ ಭಾಗವಹಿಸುವ ಮೂಲಕ ಅಭಿನಯ ಕಲೆಯನ್ನು ಬೆಳೆಸಿಕೊಂಡು 'ಅಭಿಜಾತನಟ'ರೆಂದೇ ಪ್ರಸಿದ್ಧಿ ಪಡೆದಿದ್ದಾರೆ. ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರಗಳ ಗಡಿಭಾಗದಲ್ಲಿ ಇವರ ನಟನಾ ಕೌಶಲ್ಯದಿಂದ ರಾಧಾನಾಟ ಹಾಗೂ ಸಂಗ್ಯಾಬಾಳ್ಯಾ ಬಹಳ ಪ್ರಸಿದ್ಧಿ ಪಡೆದಿದೆ. 'ಸಂಗ್ಯಾಬಾಳ್ಯಾ' ಸಣ್ಣಾಟದಲ್ಲಿ ಬೀರಪ್ಪನವರ 'ಪಾರ್ವತಿಯ ಪಾತ್ರ' ವಿಶೇಷವಾಗಿ ಜನಮೆಚ್ಚಿಗೆಯನ್ನು ಪಡೆದಿತ್ತು. ಹೀಗೆ ಅಭಿನಯದ ಜೊತೆಗೆ ರಾಧಾನಾಟ ಸಂಗ್ಯಾಬಾಳ್ಯಾ ನಿಜಗುಣ ಶಿವಯೋಗಿ ಆಟಗಳ ಭಾಗವತರಾಗಿ ಹಾಡುಗಾರರಾಗಿ ಇಂದಿಗೂ ಅವುಗಳನ್ನು ಮುನ್ನಡೆಸಿಕೊಂಡು ಮುನ್ನಡೆದಿದ್ದಾರೆ. ಅದರ ವಿವರ ಇಂತಿದೆ.

ರಾಧಾನಾಟ : (ಸು 1970. ಆರಂಭದ ತಂಡ)

ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಭಾಗವತ

1. ಶ್ರೀ ಮಲಗೌಡ ಬಾಳಗೌಡ ಪಾಟೀಲ, ತಾತ್ಯಾನ ಪಾತ್ರ
2. ಶ್ರೀ ಲಕಮಗೌಡ ಬಾಳಗೌಡ ಪಾಟೀಲ, ಗೋಪಾಲನ ಪಾತ್ರ
3. ಶ್ರೀ ಸಾಬಣ್ಣ ಬಸವಂತ ಸುಟಗಣ್ಣವರ, ದೂತಿಯ ಪಾತ್ರ
4. ಶ್ರೀ ಶಂಕರ ಬಸಬರ್ಬು ನಾಯಿಕ, ತಾಳವಾದ್ಯ

ರಾಧಾನಾಟ : (ನಂತರದ ತಂಡ)

ಶ್ರೀ ಭೀರಪ್ಪ ಹುಚ್ಚಪ್ಪ ಗೋಟೂರ ಭಾಗವತ

1. ಶ್ರೀ ಬೀಮಪ್ಪ ರಾಮಪ್ಪ ಹುದ್ದಾರ, ಗಲಪೋಜಿ ಪಾತ್ರ

2. ಶ್ರೀಮತಿ ಸಕ್ರೆವ್ವ ಯಲ್ಲವ್ವ ಪಾತ್ರೋಟ, ಚಿಮಣ ಪಾತ್ರ
3. ಶ್ರೀ ಅಶೋಕ ಗಣಪತಿ ಚವಲಗಿ, ಗೋಪಾಲನ ಪಾತ್ರ
4. ಶ್ರೀ ಅಶೋಕ ಸಿದ್ದಪ್ಪ ಪಾಟೀಲ, ತಾಳವಾದ್ಯ
5. ಶ್ರೀ ಗೈಯಬಣ್ಣಾ ನಿಂಗಪ್ಪ ಉದ್ದವಗೋಳ, ತಾಳವಾದ್ಯ
6. ಶ್ರೀ ಲಕಮಗೌಡ ಅಪ್ಪರಾಯ ಪಾಟೀಲ, ತಾಳವಾದ್ಯ
7. ಶ್ರೀ ಮಹಾದೇವ ಬಸಪ್ಪ ಮಡ್ಲಿ, ತಾಳವಾದ್ಯ
8. ಶ್ರೀ ಶಿವಲಿಂಗಪ್ಪ ಬಸಪ್ಪ ಕರವಿನಕೊಪ್ಪ, ದಪ್ಪು

ಸಂಗ್ಯಾಬಾಳ್ಯಾ

ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಭಾಗವತ

1. ಶ್ರೀ ಅಶೋಕ ಗಣಪತಿ ನಾಯಿಕ ಸಂಗ್ಯಾನ ಪಾತ್ರ
2. ಶ್ರೀ ಸಂಜೂ ಅಪ್ಪಣ್ಣ ಕರಿಗಾರ, ಬಾಳ್ಯಾನ ಪಾತ್ರ
3. ಶ್ರೀ ಕಾಡಪ್ಪ ಯಲ್ಲಪ್ಪ ಉಪ್ಪಾರ, ಈರ್ಯಾನ ಪಾತ್ರ
4. ಶ್ರೀ ಮಲ್ಲಪ್ಪ ನೀಲಪ್ಪ ದಳವಾಯಿ, ವಿರುಪಾಕ್ಷಿಯ ಪಾತ್ರ
5. ಶ್ರೀ ಲಗಮಣ್ಣಾ ಮರಡಿ, ಪರಮ್ಮನ ಪಾತ್ರ
6. ಶ್ರೀಮತಿ ಸಕ್ರೆವ್ವ ಯಲ್ಲವ್ವ ಪಾತ್ರೋಟ, ಗಂಗಾನ ಪಾತ್ರ
7. ಶ್ರೀ ನಿಂಗಪ್ಪ ಬೀರಪ್ಪ ಗೋಟೂರ, ಬಸವಂತನ ಪಾತ್ರ
8. ಶ್ರೀ ಹಾಲಪ್ಪ ಶಂಕರ ಕುಬ್ಬನಗೋಳ, ಪೂಜಾರಿ ಪಾತ್ರ
9. ಶ್ರೀ ಅಶೋಕ ಸಿದ್ದಪ್ಪ ಪಾಟೀಲ, ತಾಳವಾದ್ಯ
10. ಶ್ರೀ ಶ್ರೀಕಾಂತ ಹಾಲಪ್ಪ ಮದಮಕನಾಳ, ತಾಳವಾದ್ಯ
11. ಶ್ರೀ ರಾಯಗೌಡ ಬಸಗೌಡ ಪಾಟೀಲ, ಹಾರ್ಮೋನಿಯಂ
12. ಶ್ರೀ ಶಿವಲಿಂಗಪ್ಪ ಬಸಪ್ಪ ಕರವಿನಕೊಪ್ಪ, ಡಪ್ಪು ವಾದ್ಯ

ನಿಜಗುಣಿ :

ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಭಾಗವತ ಮತ್ತು
ಮೊದಲನೇ ನಿಜಗುಣಿ

2. ಶ್ರೀ ಕಲ್ಲಪ್ಪ ಪರಪ್ಪ ಖೋತ, ಎರಡನೇ ನಿಜಗುಣಿ
3. ಶ್ರೀ ಅಪ್ಪಣ್ಣಾ ಗೋವಿಂದ ಮಾಯಣ್ಣವರ, ಮಂತ್ರಿ ಹಾಗೂ ಬೀಸು
4. ಶ್ರೀ ದುಂಡಪ್ಪ ಭರಮಪ್ಪ ಬಾಮಿನಾಯಿಕ, ಪ್ರೇಮಿಲಾ
5. ಶ್ರೀ ಕಲ್ಲಪ್ಪ ಮನಿಟಗೋಳ್, ಕುರಡಿ
6. ಶ್ರೀ ಬಾಬು ಭೀಮಪ್ಪ ಕೋರಿ, ದೆವ್ವನ ಪಾತ್ರ
7. ಶ್ರೀ ಬಾಳಪ್ಪ ಹರಿಜನ ಮದಿಹಳ್ಳಿ, ಹಾರ್ಮೋನಿಯಂ
8. ಶ್ರೀ ಬಾಬು ಹರಿಜನ ಮದಿಹಳ್ಳಿ, ತಬಲಾ

ಡೊಳ್ಳು

ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ : ತಂಡದ ಮುಖ್ಯಸ್ಥರು

1. ಶ್ರೀ ಗೈಯಬಣ್ಣಾ ನಿಂಗಪ್ಪ ಉದ್ದವಗೋಳ, ಸಂಗಡಿಗಳು
2. ಶ್ರೀ ಬಾಬು ನಾಗಪ್ಪ ಕರಿಗಾರ, ಸಂಗಡಿಗರು
3. ಶ್ರೀ ರಾಮಪ್ಪ ನಿಂಗಪ್ಪ ಕರಿಗಾರ, ಸಂಗಡಿಗರು
4. ಶ್ರೀ ಅಪ್ಪಣ್ಣ ಬೀರಪ್ಪ ಕರಿಗಾರ, ಸಂಗಡಿಗರು
5. ಶ್ರೀ ಸಿದ್ದಪ್ಪ ಸಿದ್ರಾಮ ಮುದ್ದವ್ವಗೋಳ, ಸಂಗಡಿಗರು

ಕುಟುಂಬ :

ಬೀರಪ್ಪನವರ ಕೈಹಿಡಿದ ಅವರ ಧರ್ಮಪತ್ನಿಯಾದ ಗೌರಮ್ಮನು ಸಂಪ್ರದಾಯದ ಕುಟುಂಬದಿಂದ ಬಂದವಳು. ಪತಿಯ ಕಾರ್ಯದಲ್ಲಿ ಸಹಭಾಗಿಯಾದ ಇವಳು ವೃತ್ತಿಯಿಂದ ಬಂದ ಕುರಿ ಸಾಕಾಣಿಕೆ

ಜೊತೆಗೆ ಕಂಬಳಿ ನೂಲುವುದು, ನೇಯುವುದು ಮಾಡುತ್ತಾ ಬದುಕನ್ನು ಸಾಗಿಸುತ್ತಿದ್ದಾರೆ. ಇದ್ದ ಅಲ್ಪಸ್ವಲ್ಪ ಜಮೀನಿನಲ್ಲಿ ಏನೂ ಆದಾಯ ಸಿಗದೆ, ಕೂಲಿ ಮಾಡಿಯೇ ಬದುಕು ಸಾಗಿಸುವ ಹೊಣೆಗಾರಿಕೆಯಿದೆ. ಹೀಗಾಗಿ ಇದ್ದ ನಾಲ್ಕು ಮಕ್ಕಳಿಗೆ ಯಾರಿಗೂ ಶಿಕ್ಷಣ ಕೊಡುವ ಪ್ರಯತ್ನ ಮಾಡಲಿಲ್ಲ.

ಆದರೆ ಹಿರಿಯ ಮಗನಾದ ನಿಂಗಪ್ಪ ಗೋಟೂರ ಇವರಿಗೆ ತಂದೆಯಿಂದ ಅಭಿನಯ ಕಲೆ ಮಗನಿಗೆ ಬಳುವಳಿಯಾಗಿ ಬಂದಿದೆ. ಎರಡನೇ ಮಗ ಶಂಕರ ಗೋಟೂರ ಈತನು ಕೂಲಿ ಮಾಡಿ ಬದುಕು ಸಾಗಿಸುತ್ತಿದ್ದರೆ, ಅಕ್ಕಾತಾಯಿ ಹಾಗೂ ಮಾಲಾ ಹೆಣ್ಣು ಮಕ್ಕಳು. ಇವರು ಗಂಡನ ಮನೆಯಲ್ಲಿ ನೆಮ್ಮದಿಯಿಂದ ಬದುಕು ಸಾಗಿಸುತ್ತಿದ್ದಾರೆ.

ಕಲಾವಿದರಾಗಿ ಬೀರಪ್ಪ ಗೋಟೂರ

ಬೀರಪ್ಪ ಗೋಟೂರ ಕೇವಲ ಒಬ್ಬ ಸಣ್ಣಾಟದ ಕಲಾವಿದನಾಗಿದ್ದರೆ ಅವನಿಗೆ ಈ ಕೀರ್ತಿ ಬರುತ್ತಿರಲಿಲ್ಲ. ಒಂದು ತಂಡದ ಒಡೆಯನಾಗಿ, ದೀರ್ಘಕಾಲದ ಇವನ ತಂಡ ಸಣ್ಣಾಟದ ಒಂದು ಭಾಗವೇ ಆಗಿದೆ.

1965ರಲ್ಲಿ ನಡೆದ ಘಟನೆ, ಗಡಹಿಂಗ್ಲಜ ತಾಲ್ಲೂಕು ಖಡಗಾಂವ ಗ್ರಾಮದ ಬಸವಣ್ಣೆಪ್ಪ ಎಂಬ ಊರಿನ ನಾಯಕ ಬಂದು, ಬೀರಪ್ಪನ ತಂಡಕ್ಕೆ ವೀಳ್ಯೆವ ಕೊಟ್ಟು 'ಸಂಗ್ಯಾ-ಬಾಳ್ಯಾ' ನಾಟಕದ ದಿನಾಂಕವನ್ನು 2,500/- ರೂಪಾಯಿಗಳಿಗೆ ನಿಗದಿಪಡಿಸಿಕೊಂಡು ಹೋದನು. ನಾವು ನಮ್ಮ ತಂಡದೊಂದಿಗೆ

ಹೋಗಿ, ಮಾತಿನ ಪ್ರಕಾರ 'ಸಂಗ್ಯಾ-ಬಾಳ್ಯಾ' ಸಣ್ಣಾಟ ಆಡಿ ತಿರುಗಿ ಬರುವಾಗ ಸಂಭಾವನೆ ಹಣ ಕೇಳಿದರೆ ಬಸವಣ್ಣೆಪ್ಪನು ನಮಗೆ ತಿರಸ್ಕಾರದ ಮಾತುಗಳನ್ನು ಆಡಿದನಲ್ಲದೆ, ಅಪರಿಚಿತರಾದ ನಮಗೆ ಬಂದೂಕು ತೋರಿಸಿ ಹೆದರಿಸಿದನು. ಆಗ ನಾವು ಕುರುಬ ಸಮಾಜದ ಸಿದ್ರಾಮ ಎಂಬ ವ್ಯಕ್ತಿಯಿಂದ 500 ರೂಪಾಯಿ ಪಡೆದು ಹಿಂದಕ್ಕೆ ತಿರುಗಿ ಬರಬೇಕಾಯಿತು ಎಂದಿದ್ದಾರೆ.

1967ರಲ್ಲಿ ಚಿಕ್ಕೋಡಿ ತಾಲೂಕಿನ ಕೆರೂರಿನಲ್ಲಿ ನಡೆದ ಘಟನೆ. ಕೆರೂರಿನ ಓರ್ವ ವ್ಯಕ್ತಿ ಬಂದು, ನನ್ನನ್ನು ಕಂಡು ವೀಳ್ಯೆ ಕೊಟ್ಟು, ನಿಜಗುಣ ಶಿವಯೋಗಿ ಆಟದ ದಿನಾಂಕ ಹಾಗೂ ಸಂಭಾವನೆಯನ್ನು ನಿಗದಿಪಡಿಸಿಕೊಂಡು ಹೋದನು. ಅದರಂತೆ ನಾನು ನನ್ನ ತಂಡ ಸಮೇತ ಹೋಗಿ, ನಿಜಗುಣ ಶಿವಯೊಗಿ ಆಟವನ್ನು ಬೆಳಗಿನವರೆಗೆ ಆಡಿ ಬರುವಾಗ ಸಂಭಾವನೆಯ ಹಣ ಕೇಳಿದರೆ, ವೀಳ್ಯೆ ಕೊಟ್ಟ ವ್ಯಕ್ತಿ ಕಂಠದವರೆಗೆ ಕುಡಿದು, ಕುಡಿದ ಅಮಲಿನಲ್ಲಿ ಹೆಂಡತಿಯನ್ನು ಹೊಡೆದು ಮನಬಂದಂತೆ ಮಾತನಾಡತೊಡಗಿದ್ದನು. ಇದನ್ನು ಅರಿತ ಓರ್ವ ಹರಿಜನ ವ್ಯಕ್ತಿ ಅನುಕಂಪದಿಂದ ತಾನೇ ತನ್ನ ಕೈಯಿಂದ 200 ರೂಪಾಯಿ ಬೀರಪ್ಪನಿಗೆ ನೀಡಿ ಅವರ ತಂಡ ಸುರಕ್ಷಿತವಾಗಿ ಊರು ತಲುಪುವಂತೆ ಮಾಡಿದ.

ಮತ್ತೊಂದು ಸಂದರ್ಭದಲ್ಲಿ ಜಮಖಂಡಿಯವನೆಂದು ಹೆಸರು ಹೇಳಿಕೊಂಡು ಓರ್ವ ವ್ಯಕ್ತಿ ಬಂದು, ತನ್ನ ತಂಡಕ್ಕೆ ವೀಳ್ಯೆಕೊಟ್ಟು ಕಾರ್ಯಕ್ರಮದ ದಿನಾಂಕ ಹಾಗೂ ಸಂಭಾವನೆಯನ್ನು ನಿಗದಿಪಡಿಸಿ, ನನ್ನಿಂದಲೇ 100 ರೂಪಾಯಿ ಪಡೆದು, ಊರಿಗೆ ಹೋದ ನಂತರ

ತಿರುಗಿ ಕೊಡುವುದಾಗಿ ಹೇಳಿಹೋದನು. ನಾವು ಅಲ್ಲಿಗೆ ಹೋಗಿ ವಿಚಾರಿಸಿದಾಗ ಆತ ಜಮಖಂಡಿಯ ವ್ಯಕ್ತಿ ಅಲ್ಲವೆಂತಲೂ, ಆತ ಇದೇ ರೀತಿ ಅನೇಕ ಕಲಾವಿದರಿಗೆ ಮೋಸ ಮಾಡಿರುವುದಾಗಿ ತಿಳಿದುಬಂದಿತು. ಹೀಗಾಗಿ ಆಟವು ನಡೆಯದೆ, ಸಂಭಾವನೆಯೂ ಇಲ್ಲದೆ, ಪೇಚಾಡುವ ಪ್ರಸಂಗವು ನಮಗೆ ಎದುರಾಯಿತು. ಆಗ ಅನಿವಾರ್ಯವಾಗಿ ಡಪ್ಪು ಕಲಾವಿದ ಶ್ರೀ ಶಿವಲಿಂಗಪ್ಪ ಕರವಿನಕೊಪ್ಪ ಅವರ ಹತ್ತಿರ ಹಣ ಇದ್ದುದರಿಂದ ಜಮಖಂಡಿಯಿಂದ ತಿರುಗಿ ಬರುವಾಗ ಒಂದು ಹಳ್ಳಿಯ ಹೋಟಲಿನಲ್ಲಿ ಮಂಡಕ್ಕಿ ತಿಂದು ಚಹಾ ಕುಡಿದು ಅಲ್ಲಿಯೇ ಆ ದಿನ ಕಳೆಯಬೇಕಾಯಿತು.

ಅಲ್ಲಿಂದ ಮರುದಿನ ಬೆಳಿಗ್ಗೆ ರಾಯಭಾಗ ತಾಲ್ಲೂಕಿನ ಮುಗಳಖೋಡ ಕ್ಷೇತ್ರಕ್ಕೆ ಬರಲು, ಅಲ್ಲಿಯ ಗುರುಗಳಾದ ಯಲ್ಲಾಲಿಂಗ ಮಹಾರಾಜರ ದರ್ಶನ ಪಡೆದು ಅವರಿಗೆ ನಡೆದ ಸಂಗತಿಯನ್ನು ನಿವೇದಿಸಿದಾಗ, ಅವರು ಅಲ್ಲಿಯೇ ಉಳಿದುಕೊಳ್ಳಲು ಹೇಳಿ ಮರುದಿನ ರಾತ್ರಿ 'ರಾಧಾನಾಟ' ಆಡಲು ಅವಕಾಶವನ್ನು ಕಲ್ಪಿಸಿದರಲ್ಲದೆ, ಕೈತುಂಬ ಹಣ ನೀಡಿ ಆಶೀರ್ವದಿಸಿ ಕಳುಹಿಸಿದರು.

1970ರಲ್ಲಿ ಬೈಲಹೊಂಗಲ ತಾಲ್ಲೂಕಿನ ಬಾಳೇಕುಂದ್ರಿಯಲ್ಲಿ ನಡೆದ ಘಟನೆ, ಬಾಳೇಕುಂದ್ರಿಯ ಓರ್ವ ವ್ಯಕ್ತಿ ಬಂದು, ವೀಳ್ಯೆಕೊಟ್ಟು, ನಿಜಗುಣ ಶಿವಯೋಗಿಯ ಆಟದ ದಿನಾಂಕ ಹಾಗೂ ಸಂಭಾವನೆಯ ಹಣ 2,500 ರೂ.ಗಳಿಗೆ ಹೊಂದಿಸಿಕೊಂಡು ಹೋದನು. ಆ ಪ್ರಕಾರ ನಾನು ನಮ್ಮ ತಂಡದೊಂದಿಗೆ ಬಾಳೇಕುಂದ್ರಿಯ ಸಿದ್ದೇಶ್ವರ ದೇವಸ್ಥಾನದಲ್ಲಿ ನಿಜಗುಣ ಶಿವಯೋಗಿಯ ಆಟ ಆಡಲು, ಅಲ್ಲಿನ

ಜನ ತುಂಬಾ ಸಂತೋಷಪಟ್ಟರಲ್ಲದೇ, ತಾವೇ ಮನಸಾರೆ 2,500 ರೂಪಾಯಿ ಬದಲು 5000 ರೂಪಾಯಿ ಕೊಟ್ಟು ನಮ್ಮನ್ನು ಸತ್ಕಾರ ಮಾಡಿ ಬೀಳ್ಕೊಟ್ಟರು.

ಮನೆಯಲ್ಲಿ ಬಡತನದ ಪ್ರಸಂಗ ಇದ್ದದ್ದರಿಂದ, ಯಾರ ನೆರವೂ ಸಿಗದೆ ಇದ್ದರೂ, ಕಲೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಬದುಕಲು ಸಾಧ್ಯ ಇಲ್ಲದಿದ್ದರೂ, ಹೆಂಡತಿಯಾದ ಗೌರಮ್ಮನು ಬೇರೆಯವರ ಮನೆಯ ಹಾಗೂ ಹೊಲದ ಕೆಲಸ ಮಾಡಿ ಕೂಲಿ ಸಂಪಾದಿಸಿಕೊಂಡು ಬಂದು ಕುಟುಂಬದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಎಲ್ಲಕ್ಕೂ ಮೇಲಾಗಿ ಬೀರಪ್ಪನಿಗೆ ಹಿಡಿದ ಹಟ ಸಾಧಿಸುವ ಛಲಗಾರಿಕೆ ಇರುವುದರಿಂದ ಎಂತಹ ಕಷ್ಟ-ನಷ್ಟಗಳು, ನೋವು-ನಲಿವುಗಳಿದ್ದರೂ ಅಂದಿನಿಂದ ಇಂದಿನವರೆಗೆ ಆತ್ಮತೃಪ್ತಿಗಾಗಿ ಸಣ್ಣಾಟದ ಈ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇದು ನಿಜಕ್ಕೂ ಸಂತಸದ ಸಂಗತಿ.

ಪಸರಿಸಿದ ಕಲೆಯ ಕಂಪು :

ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಅವರು ತಂದೆಯಿಂದ ಬಳುವಳಿಯಾಗಿ ಪಡೆದ ಡೊಳ್ಳಿನ ಹಾಡು ಹಾಗೂ ಗುರುವಾದ ಗುರಪ್ಪ ಅಲಗರಾವುತ ಅವರಿಂದ ಪಡೆದ ಸಣ್ಣಾಟದಲ್ಲಿ ಅಭಿನಯಿಸುವ ಕಲೆಯನ್ನು ಆಸಕ್ತ ಕಲಾವಿದರಿಗೆ ಕಲಿಸುತ್ತ, ಆಕಾಶವಾಣಿ, ದೂರದರ್ಶನ ಕಲಾವಿದರಾಗಿ ಜಾತ್ರೆ, ಉತ್ಸವ, ಉರುಸು, ಹಬ್ಬ-ಹರಿದಿನಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಕನ್ನಡ

ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಉತ್ತರ ಕರ್ನಾಟಕ ಜನಪದ ಕಲಾವಿದರ ವೇದಿಕೆಗಳ ಇಚ್ಛೆಯಂತೆ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಹೋಗಿ ಸುಮಾರು ನೂರಾರು ಕಲಾಪ್ರದರ್ಶನಗಳನ್ನು ನೀಡಿ ಜನರ ಮನಸ್ಸನ್ನು ಸೂರೆಗೊಂಡಿದ್ದಾರೆ. ಅಂಥವುಗಳಲ್ಲಿ ಪ್ರಮುಖವಾಗಿ ಅಥಣಿ, ಧಾರವಾಡ, ಬೆಳಗಾವಿ, ಕಾರವಾರ, ಮೈಸೂರು, ಬೆಂಗಳೂರು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಂಪಿ (ಬಳ್ಳಾರಿ ಜಿಲ್ಲೆ) ಮುಂತಾದ ನಗರಗಳಲ್ಲಿ ಬೀರಪ್ಪನವರ ಡೊಳ್ಳಿನ ಕುಣಿತ ಮಾರ್ದನಿಗೊಂಡಿರುವಂತೆ, ನಿಜಗುಣಿ ಶಿವಯೋಗಿಯ ಪಾತ್ರದಲ್ಲಿ ಭಕ್ತಿಯ ಪರವಶತೆ, ಕಿತ್ತೂರ ಉತ್ಸವದಲ್ಲಿ ತಾಳವಾದ್ಯ, ಸಂಗ್ಯಾಬಾಳ್ಯಾ ಸಣ್ಣಾಟದಲ್ಲಿ ಭಾಗವತರಾಗಿ ನಿರ್ದೇಶನ ಮಾಡುವುದು, ಜೊತೆಗೆ ರಾಗಬದ್ಧವಾದ ಹಾಡುಗಾರಿಕೆ ಇವು ಬೀರಪ್ಪನವರಲ್ಲಿರುವ ಪ್ರಮುಖ ಅಂಶಗಳು. ಇವು ನಾಡಿನಾದ್ಯಂತ ಪ್ರಸಾರಗೊಂಡಿವೆ.

ಬೀರಪ್ಪನವರ ಹಾಡುಗಾರಿಕೆ ಹಾಗೂ ನಟನಾ ಕೌಶಲ್ಯ ಕೇವಲ ಕನ್ನಡನಾಡಿಗೆ ಮಾತ್ರ ಸೀಮಿತಗೊಂಡಿಲ್ಲ. ಕೊಲ್ಲಾಪುರ, ಮುಂಬೈ, ಸೊಲ್ಲಾಪುರ, ಪುಣೆಗಳಲ್ಲಿ ಇವರ ಸಣ್ಣಾಟಗಳು ಪ್ರಸಿದ್ಧವಾಗಿವೆ. 2007ರ ಜುಲೈ 21ರಂದು ದೆಹಲಿಯ ಕರ್ನಾಟಕ ಸಂಘದ ಆವರಣದಲ್ಲಿ ನಡೆದ ಸುವರ್ಣ ಕರ್ನಾಟಕ ಜಾನಪದ ಉತ್ಸವದಲ್ಲಿ ಎರಡು ದಿನಗಳವರೆಗೆ ರಾಧಾನಾಟ ಪ್ರದರ್ಶಿಸಿ ದೆಹಲಿಯ ಕನ್ನಡಿಗರ ಮೆಚ್ಚಿಗೆ ಪಡೆದಿರುವುದನ್ನು ಯಾರೂ ಮರೆಯಲು ಸಾಧ್ಯವಿಲ್ಲ.

ಅದೇ ರೀತಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಹಲವಾರು ಸ್ಥಳಗಳಲ್ಲಿ ಡೊಳ್ಳು ಬಾರಿಸುವುದು, ಹಾಡುವುದರ ಜೊತೆಗೆ ಸಣ್ಣಾಟಗಳಲ್ಲಿ ಅಭಿನಯಿಸುವುದರ ಮೂಲಕ ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅಂಥ ಸ್ಥಳಗಳಲ್ಲಿ ಪ್ರಮುಖವಾಗಿ ಹುಕ್ಕೇರಿ ತಾಲೂಕಿನಲ್ಲಿ ಹುಕ್ಕೇರಿಯ ತುರುಮಂದಿಯಲ್ಲಿ, ಜಾಬಾಪೂರ (ಹುಕ್ಕೇರಿ), ಎಲಿಮುನ್ನೊಳ್ಳಿ, ಹುಲ್ಲೋಳ್ಳಿ, ಬಿ. ಕೆ. ಶಿರಹಟ್ಟಿ, ಕಣಗಲಾ, ಬಸ್ಸವಾಡ, ಹುನ್ನೂರು, ಕುರ್ಣಿ, ಪಾಶ್ಚಾಪೂರ, ಸುಲ್ತಾನಪೂರ, ಅವರಗೋಳ, ಘೋಡಗೇರಿ, ನೇರ್ಲಿ, ರಕ್ಷಿ, ಝುಂಗಟಿಹಾಳ, ಹೆಬ್ಬಾಳ, ಸಂಕೇಶ್ವರ, ಮುಂತಾದವುಗಳನ್ನು ಹೆಸರಿಸಬಹುದು.

ಚಿಕ್ಕೋಡಿ ತಾಲ್ಲೂಕಿನಲ್ಲಿ ಉಮರಾಣಿ, ಕರೋಶಿ ರೂಪಿಹಾಳ, ಖಡಕಲಾಟ, ಸಿದ್ದಾಪೂರ, ಯಕ್ಷಂಬಾ, ಚನ್ನನ ದಡ್ಡಿ, ಚಿಂಚಲಿ ಮುಂತಾದವುಗಳನ್ನು ಹೆಸರಿಸಬಹುದು.

ಬೆಳಗಾವಿ ಜಿಲ್ಲೆಯ ಗೋಕಾಕ, ರಾಯಭಾಗ, ಸವದತ್ತಿ, ಬೈಲಹೊಂಗಲ್, ಅಥಣಿ, ಬೆಳಗಾವಿ ಇತ್ಯಾದಿ ಹತ್ತು ತಾಲೂಕಿನಲ್ಲಿ ಇವರ ಕಲೆ ಪ್ರದರ್ಶನಗೊಂಡಿವೆ.

ಹೀಗೆ ಬೀರಪ್ಪ ಹುಚ್ಚಪ್ಪ ಗೋಟೂರ ಅವರ ಅಭಿನಯಕಲೆ ಹುಕ್ಕೇರಿ ತಾಲೂಕಿನ ಹುಕ್ಕೇರಿ ನಗರಕ್ಕೆ ಮಾತ್ರ ಸೀಮಿತವಾಗಿರದೆ ಇಡೀ ಕರ್ನಾಟಕಕ್ಕೆ ಅದರಲ್ಲೂ ಬೆಳಗಾವಿ ಜಿಲ್ಲೆಗೆ ಸಂದ ಗೌರವವಾಗಿದೆ.

ಡೊಳ್ಳು ಕುಣಿತ :

ಕರ್ನಾಟಕದ ಬಿಜಾಪೂರ, ಬಳ್ಳಾರಿ, ಬೆಳಗಾವಿ, ಧಾರವಾಡ, ಗದಗ, ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ಬೆಳಗಾವಿ

ಜಿಲ್ಲೆಗಳಲ್ಲಿ ಪ್ರಚಲಿತವಿರುವ ಡೊಳ್ಳಿನ ಕುಣಿತವು ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿದ ಕನ್ನಡದ ಕಲೆ. ಮೊದಲಿಗೆ ಕುರುಬ ಸಮುದಾಯದೊಂದಿಗೆ ನೇರ ಸಂಬಂಧ ಹೊಂದಿದ್ದ ಈ ಕುಣಿತವು ಕ್ರಮೇಣ ದೀವರು, ಉಪ್ಪಾರರು, ನಾಯಕರು ಮತ್ತಿತರ ಸಮುದಾಯಗಳಿಗೂ ವ್ಯಾಪಿಸಿತು.

ಹಗುರವಾದ ಮರದ ಹೊಳಹು ಮತ್ತು ಬಳೆಗಳು ಹಾಗೂ ಚರ್ಮದ ಬಾರುಗಳಿಂದ ಬಿಗಿದು ಕಟ್ಟಿ ತಯಾರಿಸಿದ ಬೃಹತ್ ಚರ್ಮ ವಾದ್ಯವಾದ ಡೊಳ್ಳಿಗೆ ಒಂದೇ ಕೈಪೆಟ್ಟು, ಡೊಳ್ಳು ಕುಣಿತದ ಕಲಾವಿದರು ದೊಡ್ಡದಾದ ಡೊಳ್ಳುಗಳನ್ನು ಸೊಂಟಕ್ಕೆ ಕಟ್ಟಿಕೊಂಡು ಗಟ್ಟಿಯಾದ ದುಂಡನೆಯ ಚಿಕ್ಕಕೋಲುಗಳಿಂದ ಬಾರಿಸುತ್ತಾರೆ.

ಗ್ರಾಮದೇವತೆ ಬೀರದೇವರು, ಮೈಲಾರಲಿಂಗ ಮುಂತಾದ ದೇವರ ಉತ್ಸವಗಳಲ್ಲಿ ಡೊಳ್ಳಿನ ಮೇಳ ನಡೆಯುತ್ತವೆ. ಇಡಿಯಾಗಿ ಅಥವಾ ಭಾಗಶಃ ಪುನರುಚ್ಚರಿಸುವುದು ಡೊಳ್ಳಿನ ಹಾಡುಗಾರಿಕೆಯ ವಿಶೇಷ. ಹಾಡಿಗೆ ಇರುವುದು ಏಕತಾಳವೊಂದೇ. ಆದರೆ ಪ್ರತಿಯೊಂದು ಸಂಧಿಯ ಆರಂಭ ಮತ್ತು ಕೊನೆಯಲ್ಲಿ 'ಸ್ವಾಮಿ ನಮ್ಮಯ್ಯ ದೇವರು' ಎಂಬ ಪಲ್ಲವಿ ಹೇಳುತ್ತಾರೆ. ಹಾಡು ಒಂದೇ ರೀತಿ ಸಾಗುತ್ತಿರುತ್ತದೆ. ಮಧ್ಯ ಮಧ್ಯ ವಚನವಿರುತ್ತದೆ. ಡೊಳ್ಳಿನ ಪದಗಳ ವಸ್ತು ಈಗ ವೈವಿಧ್ಯವಾಗಿದೆ. ಮೊದಲಿಗೆ ಕುರುಬರು ಮಾತ್ರ ಇದನ್ನು ರೂಢಿಸಿಕೊಂಡಿದ್ದರು. ಶಿವಶರಣರ ಚರಿತ್ರೆ, ವೈದಿಕ ಸಂಪ್ರದಾಯದ ಚರಿತ್ರೆ, ರಾಮಾಯಣ, ಮಹಾಭಾರತ ಮುಂತಾದವುಗಳ ಮೇಲೆ ಡೊಳ್ಳಿನ ಹಾಡುಗಳಿವೆ.

ಬೀರಪ್ಪನ ಡೊಳ್ಳು ಎಂದೇ ಬೆಳೆದು ಬಂದ ಈ ಅದ್ಭುತ ಪ್ರದರ್ಶನ ಕಲೆಯು ಇತ್ತೀಚೆಗೆ ಧಾರ್ಮಿಕ ಆವರಣದಿಂದ ಹೊರಬಂದು ಲೌಕಿಕ ಉತ್ಸವಗಳಿಗೆ ತೆರೆದುಕೊಂಡಿದೆ. ಇಂದು ಯಾವುದೇ ಸಮಾರಂಭವಾಗಲಿ, ಖಾಸಗಿ ಇರಲಿ ಅಥವಾ ಸಾರ್ವಜನಿಕವಿರಲಿ ಡೊಳ್ಳು ಕುಣಿತವಿಲ್ಲದೆ ಕಳೆಕಟ್ಟಲಾಗದು ಎನ್ನುವಂಥ ಸ್ಥಿತಿಯನ್ನು ನಮ್ಮ ಡೊಳ್ಳು ಕಲಾವಿದರು ನಿರ್ಮಾಣ ಮಾಡಿರುತ್ತಾರೆ. ಅಂಥವರಲ್ಲಿ ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಅವರ ತಂಡವೂ ಒಂದು.

ಶ್ರೀ ಬೀರಪ್ಪ ಗೋಟೂರ ಮತ್ತು ತಂಡ ಡೊಳ್ಳು ಕುಣಿತ ಪ್ರದರ್ಶಿಸಿದ ಪ್ರಮುಖ ಸ್ಥಳಗಳು

1980ರ ಸುಮಾರಿಗೆ ಡೊಳ್ಳು ಕಲೆ ಪ್ರದರ್ಶನ ಆರಂಭಿಸಿದ ಈ ತಂಡವು ಇಂದಿನವರೆಗೂ ಅದನ್ನು ಮುಂದುವರೆಸಿಕೊಂಡು ಬಂದಿದೆ. ಸಂಕೇಶ್ವರದಲ್ಲಿ ಜರುಗಿದ ಬೆಳಗಾವಿ ಜಿಲ್ಲಾ ಮಟ್ಟದ ಯುವಜನಮೇಳ, ಉತ್ತರ ಕನಾಟಕ ಜನಪದ ಕಲಾವಿರ ವೇದಿಕೆ, ಧಾರವಾಡ ಇವರು ಸಂಯೋಜಿಸಿದ ಡೊಳ್ಳಿನ ಮೇಳ, ಡಾ॥ ಪಾಟೀಲ ಪುಟ್ಟಪ್ಪನವರ ಅದ್ಯಕ್ಷತೆಯಲ್ಲಿ ಬೆಳಗಾವಿ ನಗರದಲ್ಲಿ ಜರುಗಿದ ಅಖಿಲ ಭಾರತ 70ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಮೆರವಣಿಗೆ, ಹುಕ್ಕೇರಿ ತಾಲ್ಲೂಕು ಹುಕ್ಕೇರಿ ಇವರು ಸಂಯೋಜಿಸಿದ ಗಣರಾಜ್ಯೋತ್ಸವ, ಬೆಳಗಾವಿ ಜಿಲ್ಲಾ ಆಡಳಿತವು ಕಿತ್ತೂರಿನಲ್ಲಿ ಸಂಯೋಜಿಸಿದ ಕಿತ್ತೂರ ಉತ್ಸವ ಹಾಗೂ ಬೆಳಗಾವಿಯಲ್ಲಿ ಸಂಯೋಜಿಸಿದ ಗಡಿನಾಡ ಉತ್ಸವ, ಧಾರವಾಡ

ಉತ್ಸರ, ಮೈಸೂರು ದಸರಾ ಮಹೋತ್ಸವ ಮುಂತಾದವು ಹೆಸರಿಸಬಹುದು.

ಬೀರಪ್ಪನ ಡೊಳ್ಳು ಕುಣಿತದ ತಂಡವು ಜಾತ್ರೆ, ಉತ್ಸವ, ಉರುಸು, ಹಬ್ಬ-ಹರಿದಿನಗಳಲ್ಲಿ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನೋತ್ಸವ ಹಾಗೂ ಮಹಾಪುರುಷರ ಜಯಂತಿ ಸಂದರ್ಭದಲ್ಲಿ ಪ್ರದರ್ಶನಗೊಳ್ಳುತ್ತ ಜನರಮನ್ನಣೆ ಗಳಿಸುತ್ತ ಮುನ್ನಡೆದಿದೆ.

ಹಳ್ಳಿಯಲ್ಲಿ ಜನಿಸಿದ ಶ್ರೀ ಬೀರಪ್ಪ ಗೋಟೂರ ಅವರು ತಮ್ಮ ಡೊಳ್ಳು ಕುಣಿತದ ಕಲೆಯ ಮೂಲಕ ಮೈಸೂರು, ಬೆಂಗಳೂರು, ದೆಹಲಿ ಕಂಡದ್ದು, ತಮ್ಮ ಕಲೆಗೆ ಸಂದ ಗೌರವವೆಂದೇ ಹೇಳಬಹುದು.

ಶ್ರೀ ಬೀರಪ್ಪ ಗೋಟೂರು ಅವರು 'ರಾಧಾನಾಟ' ಹಾಗೂ 'ಸಂಗ್ಯಾ-ಬಾಳ್ಯಾ' ಪ್ರದರ್ಶಿಸಿದ ಪ್ರಮುಖ ಸ್ಥಳಗಳು

ಶ್ರೀ ಬೀರಪ್ಪ ಗೋಟೂರ ಅವರಿಗೆ ಬಾಲ್ಯದಿಂದಲೇ ಜನಪದ ಕಲೆಗಳಲ್ಲಿ ಆಸಕ್ತಿ ಇದ್ದು ಮುಂದೆ ಸಣ್ಣಾಟದ ಹೆಸರಾಂತ ಶಿಕ್ಷಕರಾದ ಗುರಪ್ಪ ಅಲಗರಾವುತ ಇವರ ಮಾರ್ಗದರ್ಶನದಲ್ಲಿ ಹಾಡು ಹಾಗೂ ಅಭಿನಯ ಈ ಉಭಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ರಾಧಾನಾಟ, ಸಂಗ್ಯಾ-ಬಾಳ್ಯಾ, ನಿಜಗುಣಿ ಮುಂತಾದ ಸಣ್ಣಾಟಗಳಲ್ಲಿ ಭಾಗವತರಾಗಿ ಕಾರ್ಯ ನಿರ್ವಹಿಸಿದ್ದಾರೆ. ಜೊತೆಗೆ ನಿಜಗುಣಿಯಲ್ಲಿ ನಿಜಗುಣಿಯಾಗಿ, ರಾಧಾನಾಟದಲ್ಲಿ ಗಲಪೋಜಿಯಾಗಿ ಬೇರೆ ಬೇರೆ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಪಾತ್ರಗಳಲ್ಲಿ ಅಭಿನಯಿಸಿ 'ಅಭಿಜಾತ ನಟ'ರೆಂದು ಖ್ಯಾತಿ ಪಡೆದಿದ್ದಾರೆ.

1980ರ ಸುಮಾರಿಗೆ ಸಣ್ಣಾಟ ಕ್ಷೇತ್ರಕ್ಕೆ ಧುಮುಕಿದ

ಬೀರಪ್ಪನವರು ಅಂದಿನಿಂದ ಇಂದಿನವರೆಗೆ ಅವ್ಯಾಹತವಾಗಿ ಈ ಕ್ಷೇತ್ರದಲ್ಲಿ ಕೃಷಿ ಮಾಡುತ್ತ ಬಂದಿದ್ದಾರೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಇವರು ಸಂಯೋಜಿಸಿದ ರಾಜ್ಯಮಟ್ಟದ ಕಲಾಮಹೋತ್ಸವ, ಬೆಳಗಾವಿಯಲ್ಲಿ ಜರುಗಿದ ದಕ್ಷಿಣ ವಲಯ ಜಾನಪದ ಕಲಾಮೇಳ, ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವ, ಮೈಸೂರು ದಸರಾ ವಸ್ತುಪ್ರದರ್ಶನ, ಖಾನಾಪೂರ ತಾಲೂಕಿನ ನಂದಗಡದಲ್ಲಿ ಸಂಯೋಜಿಸಿದ ಗಡಿನಾಡ ಉತ್ಸವ, ಬೆಳಗಾವಿಯಲ್ಲಿ ಜರುಗಿದ 70ನೇ ಕನ್ನಡ ಸಾಹಿತ್ಯ ಸಮ್ಮೇಳನ, ಹುಕ್ಕೇರಿ ತಾಲ್ಲೂಕು ಮಟ್ಟದ ಯುವಜನ ಮೇಳ, ಕಾರವಾರದಲ್ಲಿ ಜರುಗಿದ ವಿಭಾಗ ಮಟ್ಟದ ಸಂಸ್ಕೃತಿ ಸಂಭ್ರಮ, ಬೈಲಹೊಂಗಲ ತಾಲೂಕಿನ ಹಣಬರಟ್ಟಿ ಗ್ರಾಮದಲ್ಲಿ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮ ಹೆಸರಿಸಬಹುದು.

ಹುಕ್ಕೇರಿಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಜಾನಪದ ಕಲಾಮೇಳ, ಜಿಲ್ಲಾ ಆಡಳಿತ ಬೆಳಗಾವಿ ಇವರು ಸಂಯೋಜಿಸಿದ ಕಿತ್ತೂರ ಉತ್ಸವ ಹಾಗೂ ಗಡಿನಾಡು ಉತ್ಸವ, ಸುವರ್ಣ ಕರ್ನಾಟಕ ಆಚರಣೆಯ ಅಂಗವಾಗಿ ಬೆಂಗಳೂರಿನಲ್ಲಿ ಸಂಯೋಜಿಸಿದ್ದ 'ಜಾನಪದ ಜಾತ್ರೆ' ಧಾರವಾಡ ಉತ್ಸವ ಮುಂತಾದವುಗಳನ್ನು ಹೆಸರಿಸಬಹುದು.

2007ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಹಾಗೂ ದೆಹಲಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ಜರುಗಿದ ಸುವರ್ಣ ಕರ್ನಾಟಕ ಜಾನಪದ ಉತ್ಸವದಲ್ಲಿ ರಾಧಾನಾಟ

ಪ್ರದರ್ಶಿಸಿ ದೆಹಲಿಯಲ್ಲಿ ನೆಲೆಸಿರುವ ಕನ್ನಡಿಗರ ಪ್ರೀತಿಗೆ ಪಾತ್ರರಾಗಿದ್ದಾರೆ.

ಹಂಪಿ ಉತ್ಸವ, ಧಾರವಾಡ ಉತ್ಸವ, ಮೈಸೂರು ದಸರಾ ಮಹೋತ್ಸವದಲ್ಲಿ ತಮ್ಮ ಕಲಾಪ್ರತಿಭೆಯನ್ನು ಮೆರೆದು ಜನಮನ್ನಣೆ ಗಳಿಸಿದ್ದಾರೆ. ಹೀಗಾಗಿ ಅವರಿಗೆ ಸಂದ ಮಾನ ಸನ್ಮಾನಗಳು ಹಲವು.

ಪ್ರಶಸ್ತಿ ಗೌರವಗಳು

ಕುರುಬ ಕುಟುಂಬದಲ್ಲಿ ಜನಿಸಿದ ಬೀರಪ್ಪ ಗೋಟೂರ ಅವರು ತಮ್ಮ ಪರಿಶ್ರಮದಿಂದ ಹಾಗೂ ತಂದೆ ಮತ್ತು ಕಲಾವಿದರ ಸಹವಾಸದಿಂದ ಸಣ್ಣಾಟ ಕಲಿತು, ರಾಧಾನಾಟ, ಸಂಗ್ಯಾ-ಬಾಳ್ಯಾ ಮುಂತಾದ ತಂಡಗಳನ್ನು ಕಟ್ಟಿ, ಆ ಮೂಲಕವಾಗಿ ಕನ್ನಡ ನಾಡಿನ ಓರ್ವ ಜನಪದ ಕಲಾವಿದನೆಂಬ ಕೀರ್ತಿಗೆ ಭಾಜನ ರಾಗಿದ್ದಾರೆ. ಇವರ ಕಲಾಸೇವೆಯನ್ನು ಮೆಚ್ಚಿ ನಾಡಿಗೆ ನಾಡೇ ಮಾನ-ಸನ್ಮಾನ ನೀಡಿ ಪುರಸ್ಕರಿಸಿವೆ. ಅವುಗಳಲ್ಲಿ ಪ್ರಮುಖವಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಜಾನಪದ ಪರಿಷತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂತಾದವುಗಳನ್ನು ಹೆಸರಿಸಬಹುದು.

1. 7-12-1985ರಂದು ಸಂಕೇಶ್ವರದಲ್ಲಿ ಜರುಗಿದ ಬೆಳಗಾವಿ ಜಿಲ್ಲಾ ಮಟ್ಟದ ಯುವಜನ ಮೇಳದಲ್ಲಿ ಡೊಳ್ಳು ಕುಣಿತ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದಿದ್ದಾರೆ.

2. 25-11-2006ರಂದು ಸುವರ್ಣ ಕರ್ನಾಟಕ ಆಚರಣೆ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಬೆಂಗಳೂರಿನಲ್ಲಿ

ಸಂಯೋಜಿಸಿದ್ದ 'ಜಾನಪದ ಜಾತ್ರೆ'ಯಲ್ಲಿ ರಾಧಾನಾಟ ಪ್ರದರ್ಶಿಸಿದ್ದಾರೆ.

3. 21–7–2007ರಂದು ದೆಹಲಿ–ಕರ್ನಾಟಕ ಸಂಘದ ಆವರಣದಲ್ಲಿ ನಡೆದ ಸುವರ್ಣ ಕರ್ನಾಟಕ ಜಾನಪದ ಉತ್ಸವದಲ್ಲಿ 'ರಾಧಾನಾಟ' ಪ್ರದರ್ಶಿಸಿದ್ದಾರೆ.

4. ಶ್ರೀ ಗುರು ಗಡದೇಶ್ವರ ಸಂಸ್ಥಾನ ಹಿರೇಮಠ, ಕಟಕೋಳ ಚಂದರಗಿಯ ಪೀಠಾಧ್ಯಕ್ಷರಾದ ತಪೋಭೂಷಣ ಶ್ರೀ ಷ. ಬ್ರ. ವೀರಭದ್ರ ಶಿವಯೋಗ ಶಿವಾಚಾರ್ಯ ಮಹಾಸ್ವಾಮಿಗಳು ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾದ ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಇವರ ಕಲಾಸೇವೆಯನ್ನು ಮೆಚ್ಚಿ 'ಕಲಾರತ್ನ' ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದ್ದಾರೆ.

5. 'ಡೊಳ್ಳಿನ ಹಾಡಿನ ಸರದಾರ' ಎಂದೇ ಖ್ಯಾತರಾದ ಹುಕ್ಕೇರಿ ನಗರದ ಕಲಾವಿದ ಬೀರಪ್ಪ ಹುಚ್ಚಪ್ಪ ಗೋಟೂರ ಅವರು ಜಾನಪದ ಕ್ಷೇತ್ರದಲ್ಲಿ ಸಲ್ಲಿಸಿದ ಒಟ್ಟು ಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 2007ನೇ ಸಾಲಿನ 'ಜಾನಪದ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು. ಕೆರೆಮನೆ ಶಂಭು ಹೆಗಡೆ, ಡಾ. ಚಂದ್ರಶೇಖರ ಕಂಬಾರ ಹಾಗೂ ಸಕ್ರೆವ್ವಾ ಪಾತ್ರೋಟ ಮುಂತಾದವರು ಉಪಸ್ಥಿತರಿದ್ದರು.

ಮಾಸಾಶನ :

ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ 30–12–2000ದಿಂದ ಮಾಸಾಶನ ಮಂಜೂರ ಮಾಡಿದ್ದು ಮೊದಲಿಗೆ 250

ರೂಪಾಯಿಯಿಂದ ಆರಂಭವಾದ ಮಾಸಾಶನ ಈಗ ಪ್ರತಿ ತಿಂಗಳಿಗೆ 1000 ರೂಪಾಯಿ ಲಭಿಸುತ್ತಿದೆ.

ಹಿರಿಯ ಸಾಧನೆಗೆ ಮೆಚ್ಚುಗೆ

ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರು ಅವರು ತಮ್ಮ ಜೀವಿತ ಅವಧಿಯಲ್ಲಿ ಮಾಡಿದ ಹಿರಿಯ ಸಾಧನೆಯನ್ನು ಮೆಚ್ಚಿ, ನಾಡಿನ ಅನೇಕ ಗಣ್ಯ ಮಾನ್ಯರು ಸಹೃದಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಂಥವರಲ್ಲಿ ಪ್ರಮುಖವಾಗಿ ಕೆರೆಮನೆ ಶಂಭು ಹೆಗಡೆ, ಡಾ. ಚಂದ್ರಶೇಖರ ಕಂಬಾರ, ಬಿ. ಎನ್. ಪರಡ್ಡಿ, ಡಾ. ಪುರುಷೋತ್ತಮ ಬಿಳಿಮಲೆ, ಪಿ. ನಾರಾಯಣಸ್ವಾಮಿ, ಕೆ. ಆರ್. ನಿರಂಜನ್, ಮನುಬಳಿಗಾರ, ಶಾಲಿನಿ ರಜನೀಶ್, ಸಕ್ರೆವ್ವ ಪಾತ್ರೋಟ, ಬಸವರಾಜ ಕಂಬಿ, ಡಾ. ಎಸ್. ಎಂ. ಹರದಗಟ್ಟಿ ಕೆ. ಜ್ಯೋತಿ ರಾಮಲಿಂಗಂ, ಬಾನಂದೂರು ಕೆಂಪಯ್ಯ, ಡಾ. ಚಕ್ಕೆರೆ ಶಿವಶಂಕರ್, ಪ್ರೊ. ಡಿ. ಲಿಂಗಯ್ಯ, ಕೆ. ಎಚ್. ಚನ್ನೂರ ಮುಂತಾದವರನ್ನು ಹೆಸರಿಸಬಹುದು.

ರಾಜಕೀಯ ಕ್ಷೇತ್ರದಲ್ಲಿದ್ದುಕೊಂಡು ಕಲಾಸೇವೆಯನ್ನು ಮೆಚ್ಚಿಕೊಂಡು ಪ್ರೋತ್ಸಾಹಿಸಿದವರಲ್ಲಿ ದಿ. ಎ. ಬಿ. ನಾಯಿಕ, ಹೊನ್ನಪ್ಪಜ್ಞಾನೂಲಿ, ಶಂಕ್ರಯ್ಯಸ್ವಾಮಿ ಶಿವಮೊಗ್ಗಿಮಠ ಹಾಗೂ ಶಶಿಕಾಂತ ನಾಯಿಕ, ಉಮೇಶ ಕತ್ತಿ, ರಮೇಶ ಕತ್ತಿ, ಶಂಕರಾನಂದ, ಮಲ್ಲಾರಿಗೌಡ ಪಾಟಲ, ಪ್ರಭಾಕರ ಕೋರೆ, ವ್ಹಿ. ಎಸ್. ಕೌಜಲಗಿ, ಜಯಗೌಡ ಪಾಟೀಲ ಪ್ರಕಾಶ ದೇಶಪಾಂಡೆ ಮುಂತಾದವರನ್ನು ಹೆಸರಿಸಬಹುದು.

ಬೆಳಗಾವಿ ಜಿಲ್ಲೆಯ ಪೂಜ್ಯ ಶ್ರೀಗಳಾದ ನಾಗನೂರು, ನಿಡಸೋಸಿ, ಹುಕ್ಕೇರಿ, ಚಿಂಚಲಿ, ಅಥಣಿ, ಹಂದಿಗುಂದ, ಕಡಗೋಳ

ನುಡೂರ ಕ್ಷೇತ್ರದ ಶ್ರೀಗಳು ಮನಃಪೂರ್ವಕವಾಗಿ ಆಶೀರ್ವದಿಸಿದ್ದಾರೆ.

ಅದೇ ರೀತಿ ಹುಕ್ಕೇರಿ ಹಾಗೂ ಸುತ್ತಮುತ್ತಲಿನ ಕಲಾಪ್ರೇಮಿಗಳಾದ ಕಾಡಪ್ಪ ಉಪ್ಪಾರ ರಾಮಪ್ಪ ಅಲಗರಾವುತ ಹುಕ್ಕೇರಿ, ಹಸನಸಾಬ ಮಲ್ಲಾಪೂರಿ ಬಸ್ತವಾಡ, ಅಪ್ಪಣ್ಣ ಕಟ್ಟೀಮನಿ ಯಮಶೇನ ಮರಡಿ, ಲಗನೂಬಿಕ್ಕಾಳಿ ಮಣಗತ್ತಿ, ರಾಜೇಸಾಬ ಮಾಸ್ತರ ಕುರಣವಾಡಿ, ಅರ್ಜುನ ಕುರುಬರ ಹೂನ್ನೂರಿ (ಮಾಸ್ತಿಹೋಳಿ) ಶ್ರೀಮತಿ ಲಗಮವ್ವ ಮಾದಾರ ಕಣಮಟ್ಟಿ ಮುಂತಾದವರನ್ನು ಹೆಸರಿಸಬಹುದು.

ಸಮಾರೋಪ :


ನವನಾಗರೀಕತೆಯ ಪ್ರಭಾವದಿಂದ ಜನಪದ ಪ್ರಕಾರಗಳಾದ ಹಾಡು-ಕೀರ್ತನೆ, ಕೋಲಾಟ, ಬಯಲಾಟ, ಲಾವಣಿ ಪದಗಳು, ಕರಡಿ ಮೇಳಗಳು, ಹಲಗೆ ವಾದ್ಯ, ಸೋಗಿನ ವೇಷಗಳು ಕಣ್ಮರೆಯಾಗುತ್ತಿವೆ. ಜೊತೆಗೆ ಜನಪದ ಕಲಾಕಾರರು ಮೂಲೆಗುಂಪಾಗುತ್ತಿದ್ದಾರೆ. ನಮ್ಮ ಸಾಂಸ್ಕೃತಿಕ ಸಂಪತ್ತು ನಾಶವಾಗುತ್ತಿದೆ ಎಂಬ ಅಭಿಪ್ರಾಯವು ಜನಜನಿತವಾಗಿದೆ.

ಆಧುನಿಕ ಬದುಕಿನಲ್ಲಿ ಮಾನವೀಯ ಮೌಲ್ಯಗಳು ನಶಿಸುತ್ತಿರುವ ಈ ಸಂದರ್ಭದಲ್ಲಿ ಇಂತಹ ಜನಪದ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಅಗತ್ಯವಿದೆ. ನಮ್ಮ ಬದುಕನ್ನು ಸುಂದರಗೊಳಿಸುವ ಇಂತಹ ಕಲೆಗಳ ಅಂತರಾಳಕ್ಕೆ ವೈಚಾರಿಕ ಸ್ಪರ್ಶ ನೀಡಿ ಅವುಗಳನ್ನು ಹೊಸ ಜನಾಂಗದ ಎತ್ತರಕ್ಕೆ ಹೇಗೆ ನಿರೂಪಿಸುವುದು ಮುಂತಾದ ಹತ್ತು ಹಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅನಕ್ಷರಸ್ಥ

ಸಮುದಾಯ ಎಂದಾಕ್ಷಣ ತಿರಸ್ಕರಿಸದೆ ಅಕ್ಷರ ಸಮುದಾಯ ಮಾಡಿದ ಎಲ್ಲವನ್ನು ಒಪ್ಪಿಕೊಳ್ಳದೆ ಜನಪದ ರಂಗಭೂಮಿಗೆ ಹೊಸ ತಿಳುವಳಿಕೆ ಹೊಸ ಪ್ರತಿಭೆಗಳು ಸಾಗಿಬರಬೇಕಾಗಿದೆ. ಇಂದಿನ ವಿದ್ಯಾರ್ಥಿಗಳು ಕಲೆಯನ್ನು ಕೇವಲ ಕಲೆಯಾಗಿ ನೋಡದೇ ಅದನ್ನು ಪ್ರಾಯೋಗಿಕವಾಗಿ ಶಾಲಾ-ಕಾಲೇಜಗಳಲ್ಲಿ ಪ್ರಯೋಗಿಸಲು ಮುಂದಾಗಬೇಕಾಗಿದೆ. ಇಂದಿನ ಯುವಕ-ಯುವತಿಯರು ಪರಂಪರಾಗತ ಕಲೆ ಉಳಿಸಿ ಬೆಳೆಸುವಲ್ಲಿ ಶ್ರಮ ವಹಿಸಿದರೆ ಈ ಪ್ರಯತ್ನ ಸಾರ್ಥಕವೆಂದು ಭಾವಿಸುವೆ.

ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಡೊಳ್ಳು ಕುಣಿತದ ಮೇಲಾಗಿ ಸಣ್ಣಾಟದ ಕಲಾವಿದ ಹಾಗೂ ಶಿಕ್ಷಕ ಈ ಕಲಾವಿದನ ಪ್ರತಿಭೆಯನ್ನು ಗುರುತಿಸುವುದು, ಗೌರವಿಸುವುದು ಸಮಾಜದ ಸರ್ಕಾರದ ಮುಖ್ಯ ಕರ್ತವ್ಯ.

ಅನುಬಂಧ-2



ಬೀರಪ್ಪ ಹುಚ್ಚಪ್ಪ ಗೋಟೂರ ಅವರಿಗೆ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಅವರು 2007ನೇ ಸಾಲಿನಲ್ಲಿ ನೀಡಿದ ಗೌರವ ಪ್ರಶಸ್ತಿ. ಅಕಾಡೆಮಿ ಅಧ್ಯಕ್ಷ ಕೆರೆಮನೆ ಶಂಭು ಹೆಗಡೆ, ಸಾಹಿತಿ ಡಾ. ಚಂದ್ರಶೇಖರ ಕಂಬಾರ, ಅಕಾಡೆಮಿಯ ಸದಸ್ಯ ಸಕ್ರೆವ್ವ ಪಾತ್ರೋಟ ಪ್ರಶಸ್ತಿ ಪುರಸ್ಕಾರ ನೀಡಿ ಸತ್ಕರಿಸುತ್ತಿರುವುದು.

ಅನುಬಂಧ–1 ವೈಯಕ್ತಿಕ ವಿವರ

ಶ್ರೀ ಬೀರಪ್ಪ ಹುಚ್ಚಪ್ಪ ಗೋಟೂರ ಹಳ್ಳದಕೇರಿ ಹುಕ್ಕೇರಿ

ಜನ್ಮದಿನಾಂಕ	:	25–2–1942
ಜನ್ಮಸ್ಥಳ	:	ಗೋಟೂರ ತಾ॥ ಹುಕ್ಕೇರಿ ಜಿಲ್ಲೆ ಬೆಳಗಾವಿ
ಜಾತಿ	:	ಹಿಂದೂ (ಕುರುಬರ)
ಶಿಕ್ಷಣ	:	ಮೂರನೇ ತರಗತಿ
ಕುಟುಂಬ	:	ರೈತಾಪಿ
ಕಾಯಕ	:	ಕುರಿ ಕಾಯುವುದು, ಕಂಬಳಿ ನೂಲುವುದು
ಹವ್ಯಾಸ	:	ಡೊಳ್ಳಿನ ಪದ ಕಟ್ಟಿ ಹಾಡುವುದು, ಡೊಳ್ಳು ಬಾರಿಸುವುದು, ಸಣ್ಣಾಟದಲ್ಲಿ ಅಭಿನಯಿಸುವುದು. ನಿರ್ದೇಶನ ಮಾಡುವುದು
ಮಾಸಾಶನ	:	250 ರೂಪಾಯಿ ಇಂದ 1000
ಮಕ್ಕಳು	:	ನಿಂಗಪ್ಪ ಭೀರಪ್ಪ ಗೋಟೂರ (ಕಲಾವಿದ) ಶಂಕರ ಬೀರಪ್ಪ ಗೋಟೂರ (ಕೂಲಿ) ಅಕ್ಕಾತಾಯಿ ಬೀರಪ್ಪ ಗೋಟೂರ ಮಾಲು ಬೀರಪ್ಪ ಗೋಟೂರ

ಕರ್ನಾಟಕ ಜಾನಪದ ಪರಂಪರೆಯ ಶ್ರೀಮಂತಿಕೆಗೆ ಹೆಸರಾದ ಊರು ಬೆಳಗಾವಿ ಜಿಲ್ಲೆ ಹುಕ್ಕೇರಿ. ಪಾರಿಜಾತ, ಗೊಂಬೆಯಾಟ, ಸಣ್ಣಾಟ, ಬಯಲಾಟ, ಪಗರಣ, ಡೊಳ್ಳು ಎಲ್ಲವೂ ಈ ನೆಲದಲ್ಲಿ ಮತ್ತೆ ಮತ್ತೆ ಪ್ರಯೋಗ–ಪರಿಷ್ಕರಣೆಗಳಿಗೆ ಒಳಗಾಗುತ್ತ ಬೆಳೆದು ಬಂದಿವೆ. ಇಂತಹ ನೆಲದಲ್ಲಿ ಅರಳಿ ಹೊರ ಹೊಮ್ಮಿದ ಅಪರೂಪದ ಕಲಾವಿದ ಬೀರಪ್ಪ ಗೋಟೂರ. ಪಾರಿಜಾತದ ಖ್ಯಾತ ಕಲಾವಿದೆ ಕೌಜಲಗಿ ನಿಂಗಮ್ಮನ ಶಿಷ್ಯನಾಗಿ ಅತ್ಯುತ್ತಮ ನಟನೆಯನ್ನು ಮೈಗೂಡಿಸಿಕೊಂಡು ತಂದೆಯಿಂದ ದತ್ತವಾಗಿ ಬಂದ ಡೊಳ್ಳು ಮತ್ತು ಡೊಳ್ಳಿನ ಹಾಡುಗಳನ್ನು ಅರಗಿಸಿಕೊಂಡು ಡೊಳ್ಳಿನ ಹಾಡಿನ ಸರದಾರನೆಂದು ಮನೆಮಾತಾದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಬೀರಪ್ಪ ಹಚ್ಚಪ್ಪ ಗೋಟೂರ ಅವರ ಬದುಕು ಮತ್ತು ಸಾಧನೆಯನ್ನು ಕುರಿತು ನಾಡಿನ ಪ್ರಸಿದ್ಧ ವಿದ್ವಾಂಸರಾದ ಡಾ. ರಾಜಶೇಖರ ಇಚ್ಚಂಗಿಯವರು ಪ್ರಾಮಾಣಿಕವಾಗಿ ದಾಖಲಿಸಿದ್ದಾರೆ

-ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು

ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪
E-mail : janapadaparishath@hotmail.com